# ಸರ್ವಜ್ಞನ ಲೋಕದೃಷ್ಟಿ

♦ **ಡಾ.ಎಸ್.ಬಿ. ಚನ್ನಗೌಡ್ರ**. ಎಂ.ಎ ಪಿಹೆಚ್.ಡಿ

**ಕನ್ನಡ ಪ್ರಾಧ್ಯಾಪಕರು ಹಾಗೂ ಪಾಚಾರ್ಯರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಮಹಾವಿದ್ಯಾಲಯ ಹಾಗೂ ಸ್ನಾತ್ತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು.**

ಭಾರತೀಯ ಸಾಹಿತ್ಯ ನಿರ್ಮಾಣಕಾರರಲ್ಲಿ ಒಬ್ಬನೂ ಸಂಸ್ಕೃತಿಯನ್ನು ರೂಪಿಸಿದವರಲ್ಲಿ ಮುಖ್ಯನೂ ಆದ ಸರ್ವಜ್ಞನು ವರಕವಿ ಅಷ್ಟೇ ಅಲ್ಲ ಚಿರಕವಿ ಕೂಡಾ. ದಕ್ಷಿಣ ಭಾರತದ ಶ್ರೇಷ್ಠ ಮಟ್ಟದ ಕವಿಗಳಾದ ತಿರುವಳ್ಳುವರ್ ಹಾಗೂ ವೇಮನರಷ್ಟೇ ಪ್ರಸಿದ್ದನಾದವನೀತ. ಸಂಸ್ಕೃತದ ವ್ಯಾಸ, ಕಾಳಿದಾಸ ಮತ್ತು ಕನ್ನಡದ ಪಂಪ, ರನ್ನ, ಕುಮಾರವ್ಯಾಸರಂತೆ ಮಹಾಕಾವ್ಯಗಳನ್ನು ಬರೆಯದೇ **'ಮಹಾಕವಿ'** ಎನಿಸಿ ಕೊಂಡವನೀತ. ರಾಜಾಶ್ರಯದ ಹಂಗಿಲ್ಲದೆ, ಗುರುಮನೆಗಳ ಆಶ್ರಯವಿಲ್ಲದೆ ಲೋಕವನ್ನೆ ನೆಲೆಮನೆಯಾಗಿಸಿ ಕೊಂಡು ಬದುಕಿದವನು. ತಾನು 'ನೆಲೆ' ಯಾಗಿಸಿಕೊಂಡ ಸಮಾಜದಿಂದಲೇ ಕಲಿತ ಬದುಕಿನ ಪಾಠಗಳನ್ನು ಅದೇ ಸಮಾಜವನ್ನು ತಿದ್ದಲು ಕಲಾತ್ಮಕವಾಗಿ ವಚನ–ತ್ರಿಪದಿಗಳ ಮೂಲಕ ಹಾಡಾಗಿಸಿದ ಹುಟ್ಟು ಕಲಾಕಾರನಿವನು. ಕಾಲಲ್ಲಿ ಚಕ್ರ ಕಟ್ಟಿ ಕೊಂಡವನಂತೆ ದಶ ದಿಕ್ಕುಗಳಿಗೂ ಚಲಿಸುತ್ತಾ ಅನುಭವನಗಳನ್ನು ಘನೀಕರಿಸಿ ಕೊಂಡ **'ಜಂಗಮ–ಕವಿ'**ಸರ್ವಜ್ಞ ಜನಸಾಮಾನ್ಯರೊಂದಿಗೆ ಬೆರೆತು ಅವರ ಸರಳವಾದ ಭಾಷೆ, ನುಡಿಗಟ್ಟುಗಲ್ಲಿಯೇ ತ್ರಿಪದಿಗಳನ್ನು ರಚಿಸುವುದರ ಮೂಲಕ 'ಜನತೆಯ ಕವಿ' ಯನಿಸಿ ಕೊಂಡಿದ್ದಾನೆ. ಈ ಮೂಲಕ 'ಸಾಹಿತ್ಯವೆಂದರೆ ಜನಜೀವನದ ಪ್ರತಿಬಿಂಬ' ಎನ್ನುವುದನ್ನು ಅಕ್ಷರಶ: ತೋರಿಸಿದ್ದಾನೆ. ತನ್ನ ವಚನಗಳ ಮೂಲಕ ವಿವೇಕ ಮತ್ತು ವ್ಯವಹಾರ ಜ್ಞಾನಗಳೆರಡನ್ನೂ ಬೋಧಿಸಿದ ಸರ್ವಜ್ಞ ಒಪ್ಪುವ ಮೌಲ್ಯಗಳನ್ನು ಪ್ರಸಂಶಿಸುತ್ತಾ ಅಪಮೌಲ್ಯಗಳನ್ನು ಟೀಕಿಸುತ್ತಾ ಲೋಕಕ್ಕೆ ಗುರುವಾಗುತ್ತಾನೆ.

ಕನ್ನಡ ಸಾಹಿತ್ಯ ಚರಿತ್ರೆಯ ಭವ್ಯ ಪರಂಪರೆಯಲ್ಲಿ ಸಾಮಾನ್ಯರಾಡುವ ರೂಢಗನ್ನಡದ ಮೂಲಕ ಜನಪ್ರಿಯತೆ ಗಳಿಸಿದ ಶ್ರೇಷ್ಠ ವ್ಯಕ್ತಿತ್ವ, ಸರಳ ಸಜ್ಜನಿಕೆಯ ಸಾಕಾರಮೂರ್ತಿ, ಸರ್ವಜ್ಞನೆಂಬುದು ಹೆಮ್ಮೆಯ ವಿಚಾರ. ಪ್ರಸ್ತುತ ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಅಂಬಲೂರು ಇತನ ಊರು. ಇತನ ಕಾಲದ ಬಗ್ಗೆ ಸಮರ್ಪಕವಾದ ದಾಖಲೆಗಳ ಕೊತರೆಯಿಂದ ಜೊತೆಗೆ ಇತನ ವಯಕ್ತಿಕ ಬದುಕಿನ ಸ್ಪಷ್ಟಚಿತ್ರಣ ಸಿಗಲಾರದು. ಆದರೆ ವಿದ್ವಾಂಸರ ತರ್ಕಬದ್ದ ವಿಚಾರ ಸರಣಿಗಳಿಂದ ಬಹುಜನ ಗಟ್ಟಿ ಅಭಿಪ್ರಾಯದಿಂದ ಇತನ ಕಾಲವನ್ನು ಕ್ರಿ.ಶ. ೧೬೦೦ ಎಂದು ತಿಳಿಯಲಾಗಿದೆ. ಇತನ ತಾಯಿ ಅಬಲೂರಿನ ಕುಂಬಾರ ಮಾಳಿ ಅಥವಾ ಮಾಳವ್ವ. ತಂದೆ 'ಬಸವರಸ' ಎಂದು ತಿಳಿಸಲಾಗಿದೆ. ಸರ್ವಜ್ಞನ ವಚನಗಳು ಓದು ಬಾರದ ವ್ಯಕ್ತಿಗಳಿಗೆ, ಓದುಗರಿಗೆ ಅರ್ಥವಾಗಿ ಮನಸ್ಸಿನಲ್ಲಿ ಉಳಿದಂತೆ ಭೇದಭಾವವಿಲ್ಲದೆ ಸಕಲರ ಮನಸ್ಸಿನ ಆಳಕ್ಕಿದಿವೆ. ತಮಿಳುನಾಡಿನ ತಿರುವಳ್ಳರ್, ತೆಲುಗಿನ – ವೇಮನ, ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ ವ್ಯಕ್ತಿ ಸರ್ವಜ್ಞ.

ಸರ್ವಜ್ಞನು ತನ್ನ ತ್ರಿಪದಿಯ ವಚನಗಳನ್ನು ವೀರಶೈವಧರ್ಮದ ಅಷ್ಟಾವರಣ, ಷಟಸ್ಥಲ ತತ್ವಗಳ ನಿರೂಪಣೆಯ ಜೊತೆ ಬಸವಾದಿ ಶಿವಶರಣರ ಉದಾತ್ತ ವಿಚಾರಗಳ ಜೊತೆ ಸಾಮಾಜಿಕ ಸಮಾನತೆಗಾಗಿ ಹೇಳಿದ ಈ ಕೆಳಗಿನ ವಚನ ನೋಡಿದರೆ ವ್ಯಕ್ತಿತ್ವ ತಿಳಿಯುತ್ತದೆ.

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೆ?
ಜಾತಿ ವಿಜಾತಿ ಎನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ

ಇಲ್ಲಿ ಜಾತಿ – ಜಾತಿವ್ಯವಸ್ಥೆ ಮಾನವ ನಿರ್ಮಿತ ದೇವರ ಪ್ರೀತಿಗೆ ಪಾತ್ರನಾದವನು ಜಾತಿವಂತ – ಹೀಗಾಗಿ ಜ್ಯೋತಿ ಯಾರಮನೆಯಲ್ಲೂ ಬೇಧವಿಲ್ಲದೆ ಬೆಳಗುತ್ತದೆ ಎಂಬ ವಿಚಾರ ಅಮೋಘ. ಜನಪದ ಸಾಹಿತ್ಯದ ಸುಭಾಷಿತಗಳಂತಿರುವ ತ್ರಿಪದಿಗಳು ಜನಪದ ಸಂಸ್ಕೃತಿಯ ನೀತಿ ಸಂಹಿತೆಗಳಂತೆ ಕೆಲಸ ಮಾಡುವುದನ್ನು ನಾವು ಕಾಣಬಹುದಾಗಿದೆ. ಜಾನಪದ ಸಾಹಿತ್ಯದ ಒಂದು ಬಗೆಯ ವಿಶಿಷ್ಟ ರಚನೆಗಳಾಗಿರುವ ಗಾದೆಗಳು ಜನಪದರ

ದೃಷ್ಟಿಯಲ್ಲಿ ವೇದಕ್ಕೆ ಸಮಾನ. ವೇದ ಸುಳ್ಳಾದರು ಗಾದೆಗಳು ಸುಳ್ಳಾಗವು, ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಗಾದೆಗಳು ಸಮುದಾಯ ಜೀವನದ ಮತ್ತು ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ. ಜಾನಪದರು ಬಾಯಿಬಿಟ್ಟರೆ ಗಾದೆ ಉದರುತ್ತದೆ. ಅವರ ಮಾತುಗಳಲ್ಲಿ ಗಾದೆಗಳು ಸೇರಿ ಕೊಂಡಿರುತ್ತವೆ. ಸರ್ವಜ್ಞನ ತ್ರಿಪದಿಗಳಲ್ಲಿ ಜನಪದರ ಗಾದೆಗಳು ಸಾಕಷ್ಟು ಸಂಖ್ಯೆಯಲ್ಲಿ ಬೆರೆತು ಕೊಂಡಿವೆ. ಇದಕ್ಕೆ ಕಾರಣ ಸಮುದಾಯಗಳ ಮಧ್ಯದಲ್ಲಿಯೆ ಸಿದ್ದರಂತೆ ಬದುಕಿ, ನಡೆದಾಡಿದ ಅವನಿಗೆ ಅವರದೇ ಬದುಕಿನ ಗಾದೆಗಳನ್ನು ಬಳಸಿ ತ್ರಿಪದಿ ರಚಿಸಿ ಹಾಡಿದಾಗ ತಕ್ಷಣವೇ ಅವರು ಅವುಗಳನ್ನು ಒಪ್ಪಿಕೊಂಡರು. ಅಷ್ಟೇ ಅಲ್ಲ ಗಾದೆಗಳಿಂದ ಈತನೂ ಸಾಕಷ್ಟು ಪ್ರಭಾವಿತನಾಗಿದ್ದಾನೆ. ಗಾದೆಗಳನ್ನು ತ್ರಿಪದಿಗಳಲ್ಲಿ ಬಳಸಿಕೊಂಡವರಲ್ಲಿ ಈತನೇನೂ ಮೊದಲಿಗನಲ್ಲ, ವಚನಕಾರರು, ದಾಸರು ತಮ್ಮ ವಚನ, ಕೀರ್ತನೆಗಳಲ್ಲಿ ಸಮರ್ಥವಾಗಿ ಗಾದೆಗಳನ್ನು ಬಳಸಿ ಕೊಂಡಿದ್ದಾರೆ. ಇದಕ್ಕೆ ಕಾರಣವೆಂದರೆ ಅತೀ ಕ್ಲಿಷ್ಟ ವಿಷಯಗಳನ್ನು ಅತೀ ಸರಳವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ಮಾರ್ಮಿಕವಾಗಿ ಹೇಳುವುದು ಗಾದೆಗಳಿಂದ ಸಾಧ್ಯವೆಂಬುದು.

ಸರ್ವಜ್ಞ ಕನ್ನಡ ನಾಡು, ಭಾರತ ಕಂಡ ಅಪರೂಪದ ಮಹಾಕವಿ, ಸಂತ, ಇಂದಿಗೂ ಅವನ ವಚನಗಳಿಲ್ಲದೆ ಜನರು ಮಾತನಾಡಲಾರರು. ಅವನ ವಚನಗಳನ್ನು ತಮ್ಮ ಬದುಕಿನ ಎಲ್ಲ ಕ್ಷಣಗಳಲ್ಲಿ ದಿನದಿನವೂ ನೆನೆಯುತ್ತಾರೆ. ಅವನ ವಚನಗಳು 'ಜೀವನ ವಿವೇಕದ ಕನ್ನಡಿ' ಆಗಿವೆ. ಈ ದೃಷ್ಟಿಯಿಂದ ಆತ ಸಾರ್ವಕಾಲಿಕ. "ಸರ್ವಜ್ಞನು ಕಾಲ ಮಾತ್ರದಿಂದ ಅಂದಿನವನಾದರೂ ಮನೋಧರ್ಮ ಯುಗಧರ್ಮಗಳ ದೃಷ್ಟಿಯಿಂದ ಇಂದಿನವನೂ ಆಗಿದ್ದಾನೆ".

ಲೌಕಿಕದಲ್ಲಿ ಸಮಾಜವಾದಿಯಾದ ಈತ ಅಂತರಂಗದಲ್ಲಿ ಅನುಭಾವಿ, ದಾರ್ಶನಿಕನಾದ ಸರ್ವಜ್ಞ, ಸಾಹಿತ್ಯ ಹಾಗೂ ಸಾಂಸ್ಕೃತಿಕವಾಗಿ ಕ್ರಾಂತಿಕಾರಿ, ಬಂಡಾಯ ಮನೋಧರ್ಮದವನು. ವಿಚಿತ್ರವಾಗಿ, ವಿಕ್ಷಿಪ್ತವಾಗಿ ಸಮಾಜದ ಕಣ್ಣಿಗೆ ಕಂಡ ಈತ ಅದೇ ಸಮುದಾಯದ ಜಾಗೃತಿಗಾಗಿ ಮಾತಿನ ಚಾಟಿ ಬೀಸಿದವನು, ಜನಪದ ಸತ್ವದ ತ್ರಿಪದಿ ಬಳಸುವುದರ ಮೂಲಕ ಕನ್ನಡದ ಪ್ರಜ್ಞೆ ಹಾಗೂ ಭಾಷೆಯ ಅನಂತ ಸಾಧ್ಯತೆಗಳನ್ನು ವಿಸ್ತರಿಸಿದವನು. ಹೀಗಾಗಿ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಅವನೊಂದು ಮಕುಟಪ್ರಾಯ.

ಆಕಸ್ಮಿಕವಾಗಿ ಯಾವುದೋ ಒಂದು ಜಾತಿಯಲ್ಲಿ ಆತ ಹುಟ್ಟಿದರೂ ಜಾತಿ, ಭಾಷೆ, ಗಡಿಗಳನ್ನು ಮೀರಿನಿಂತ ಸೀಮಾತೀತ ವ್ಯಕ್ತಿತ್ವ ಆತನದು. ನಿಜ ಹೇಳ ಬೇಕೆಂದರೆ, ಸರ್ವಜ್ಞ, ಕನಕ, ಶರೀಪರಂಥವರಿಗೆ ಜಾತಿ, ಧರ್ಮಗಳು ಬಂಧನಗಳೆ ಇಲ್ಲ. ಹಾಗಾಗಿಯೇ ಇವರೆಲ್ಲ ಸರ್ವಾದರಣೀಯರು.

ಸರ್ವಜ್ಞ ಕನ್ನಡನಾಡು, ಭಾರತ ಕಂಡ ಅಪರೂಪದ ಕವಿ, ಇಂದಿಗೂ ಅವನ ವಚನಗಳಿಲ್ಲದೆ ಜನರು ಗ್ರಾಮೀಣ ಪ್ರದೇಶದಲ್ಲಿ ಮಾತನಾಡಲಾರರು. ಅವನ ವಚನಗಳಲ್ಲಿಯ ಸತ್ವನ್ನು ನಮ್ಮ ಸರ್ವಜ್ಞನು ಹೇಳಿದ ಎಷ್ಟೋ ವಿಚಾರಗಳು ಸಾರ್ವಕಾಲೀಕ ಸತ್ಯಗಳಾಗಿವೆ.

ಲೌಕಿಕ ಸಮಾಜವಾದಿಯಾದ ಸರ್ವಜ್ಞ ಅಂತಚಕ್ಷು ಹೊಂದಿದ ಅನುಭಾವಿ ದಾರ್ಶನಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ರಾಂತಿಯನ್ನುಂಟು ಮಾಡಿದವನು. ಬಂಡಾಯ ಮನೋಧರ್ಮದ ಇತ ಸಮಾಜದಲ್ಲಿ ಕಂಡದ್ದನ್ನು ಕಂಡ ಹಾಗೆ ಹೇಳಿ ಜನರ ಮನಸ್ಸಿನ ಕಾಯಿಲೆಗಳಿಗೆ ತಮ್ಮ ಸಾಹಿತ್ಯದ ಮೂಲಕ ಔಷಧಿಯನ್ನು ಕೊಟ್ಟ ಸಾಹಿತ್ಯ ವೈದ್ಯನಾಗಿದ್ದಾನೆ. ಸಮುದಾಯದ ಜಾಗೃತಿಗಾಗಿ ಮಾತಿನ ಚಾಟಿ ಬೀಸಿದವನು. ಜನಪದ ಸತ್ವದ ತ್ರಿಪದಿ ಬಳಸುವುದರ ಮೂಲಕ ಕನ್ನಡದ ಪ್ರಜ್ಞೆ, ದೇಸಿಯ ಶೈಲಿಯ ರಚನೆ ಹೆಚ್ಚಿಸಿ, ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಸಾಂಸ್ಕೃತಿಕ ಜೀವನವು ಶ್ರೀಮಂತವಾಗಲು ಈತನದು ಸಿಂಹಪಾಲು.

ಸರ್ವಜ್ಞ ಸಾಮಾನ್ಯರಂತೆ ಈ ನೆಲದ ಮೇಲೆ ಬದುಕಿ ಹೋಗಿರುವವನು, ಆದ್ದರಿಂದ ಸರ್ವಜ್ಞನನ್ನು ಇತರ ಸಾಹಿತಿಗಳಂತೆ ಸಮತೂಕದಲ್ಲಿಯೇ ಗುರುತಿಬೇಕಾಗುತ್ತದೆ. ಊರೂರು ತಿರುಗಿ ಸಹಸ್ರ ಸತ್ಯಗಳನ್ನು ಕಂಡು ಕೇಳಿ ಅದನ್ನೇ ಜಗತ್ತಿಗೆ ಕೊಟ್ಟಿರುವುವಂತದ್ದು ಅವನ ಸಾಹಿತ್ಯದ ವಿಶೇಷವಾಗಿದೆ. ಸರ್ವಜ್ಞನು ಕೂಡಾ ಒಂದು ಹೊಸ ಪರಂಪರೆಯ ನಿರ್ಮಾಣ ಮಾಡಲು ಹೊರಟವನಲ್ಲ ಆದರೂ ಕೂಡಾ ಸಮಾಜ ವಿರೋಧಿ ಶಕ್ತಿಗಳ ವಿರುದ್ದ ಸೆಣಸಾಡಿ ಸಮಕಾಲೀನ ಮೌಲ್ಯಗಳನ್ನು ಅರ್ಥೈಸಿಕೊಂಡು ಯಾವ ನಿರ್ಭಿಡೆಯು ಇಲ್ಲದೆ ಯಾರ ಜೊತೆಯು ರಾಜೀಮಾಡಿಕೊಳ್ಳದೆ, ಯಾವ ಧಯೇ, ದಾಕ್ಷಿಣ್ಯಗಳಿಗೆ ಒಳಗಾಗದೇ ನಿಷ್ಠೂರ ಸತ್ಯಗಳನ್ನೇ ತನ್ನ ಸಾಹಿತ್ಯಕ್ಕೆ ಆಕರ ಸಾಮಗ್ರಿಗಳಾಗಿ ತೆಗೆದುಕೊಳ್ಳುತ್ತಾನೆ. ಅವನ ವಚನಗಳಲ್ಲಿ ಅವನ ಅಂತರಂಗದ ತುಡಿತವನ್ನು, ಮಿಡಿತವನ್ನು ಅವಲೋಕಿಸಿದರೆ ಅವನ ಸಾಹಿತ್ಯದ ಸಾಮರ್ಥ್ಯ ಗೊತ್ತಾಗದೇ ಇರದು. ನುಡಿಯಲ್ಲಿ ನಡೆಯಲ್ಲಿ ಅಪ್ಪಟನಾಗಿ ಯಾವ ಬೂಟಾಟಿಕೆಗಳಿಗೂ ಒಳಗಾಗದೇ ಸಮಾಜದ ಸೋಗಲಾಡಿತನಗಳಿಗೆ ಚಡಿಏಟು ಕೋಡುತ್ತಾನೆ. ಮೂಡನಂಬಿಕೆ ಡಂಬಾಚಾರದ ಮುಸುಕನ್ನು ತೆಗೆದು ಸತ್ಯದೊಂದಿಗೆ ಸಮೀಕರಿಸಲು ಪ್ರಯತ್ನಿಸುತ್ತಾನೆ.

ಇಲ್ಲಿಲ್ಲವೆಂಬುದನು । ಇಲ್ಲಿಯೇ ಅರಸುವದು ।
ಇಲ್ಲಿಲ್ಲವೆಂದರಿಯಲೊಡನೆ ಜಗ ।
ವೆಲ್ಲ ಒಳಗಿಕ್ಕು ಸರ್ವಜ್ಞ

ಸತ್ಯವೆಂಬುದು ತಾನು । ಹಿತ್ತಲದ ಗಿಡನೋಡ ।
ಮತ್ತೆಲ್ಲಿ ನೋಡಿ ಅರಸದಲೆ ತಾನಿರ್ದ ।
ಹತ್ತಿರವೇ ನೋಡ ಸರ್ವಜ್ಞ

ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೇಳಬಲ್ಲ ಶಕ್ತಿ ಸರ್ವಜ್ಞನ ತ್ರಿಪದಿಗಿದೆ. ಗಾತ್ರದಲ್ಲಿ ಕಿರಿದಾದರೂ ವ್ಯಾಪ್ತಿಯಲ್ಲಿ ಹಿರಿದಾದ ಸ್ವರೂಪ ಪಡೆಯಬಲ್ಲ ಏಕೈಕ ಕನ್ನಡದ ಛಂದಸ್ಸು ತ್ರಿಪದಿ. ಇವನ ವಚನಗಳಲ್ಲಿ ಸಂಸ್ಕೃತದ ಪ್ರಭಾವ ದಟ್ಟವಾಗಿ ಕಾಣುವುದಿಲ್ಲಾ. ಸರಳ ಕನ್ನಡದಲ್ಲಿ ಓದುಗರ ಮನಸ್ಸಿನ ಮೇಲೆ ಅಚ್ಚೊತ್ತುವಂತಹ ಪ್ರಭಾವ ಬೀರುತ್ತಾನೆ. ಅವನ ತ್ರಿಪದಿಗಳ ದಾಟಿ ಚಾಟಿಯ ಏಟಿನಂತೆ ಎಚ್ಚರಿಸುತ್ತದೆ. ಅಷ್ಟೇ ಅಲ್ಲ ಕಾಂತಾ ಸಂಮಿತದಂತೆ, ಮಿತ್ರ ಸಂಮಿತದಂತೆ ಕಂಡರೂ ಕೆಂಡದ ಉಂಡೆಗಳಾದರೂ, ಅವನ ಹಿತ ವಚನಗಳು ತಂಪು ನೀಡುವ ನಂದಾದೀಪದ ಬೆಳಕಿನಂತೆ ಪ್ರಜ್ವಲಿಸುತ್ತವೆ. ದೇಶ ಭಕ್ತನಾಗಿ ಸಮಾಜ ವಿಮರ್ಶಕನಾಗಿ ಗುರು, ತತ್ವಜ್ಞಾನಿ, ವ್ಯವಹಾರ ನಿಪುಣನಾಗಿ ಮಿತ್ರನಾಗಿ ಮಾತೃಸ್ವರೂಪದ ಉಪದೇಶ ನೀಡುತ್ತಾನೆ. ಮಾನವನ ಜೀವನವನ್ನು ಸಮಗ್ರವಾಗಿ ನೋಡುತ್ತಾನೆ ಸಮಾಜದ ಎಲ್ಲ ದ್ವಂದಗಳನ್ನು ಧೈರ್ಯದಿಂದ ಸಮನ್ವಯಗೊಳಿಸುವ ವಿಶಿಷ್ಟ ದೂರದೃಷ್ಟಿ ಈತನ ವಚನಗಳಲ್ಲಿದೆ. ಇವನ ತ್ರಿಪದಿಗಳಲ್ಲಿ ಏನಿಲ್ಲಾ? ಎನ್ನುವದಕ್ಕಿಂತ ಎಲ್ಲವೂ ಅಡಗಿದೆ. ಸಾಮಾಜಿಕ ಕಳಕಳಿ ಬದುಕಿನ ಮೌಲ್ಯಗಳು, ಧರ್ಮ ಸಮನ್ವಯತೆ, ಕೌಟುಂಬಿಕ ಜೀವನದ ಸಾಮರಸ್ಯತೆ, ಹೇಡಿಗೆ ಆತ್ಮ ಸ್ಥೈರ್ಯ ತುಂಬುವ, ನಿರಾಶಾವಾದಿಗಳನ್ನು ಆಶಾವಾದಿಗಳನ್ನಾಗಿ ಮಾಡಬಲ್ಲ ಜೀವನ ಮೌಲ್ಯಗಳನ್ನು ಭರವಸೆಗಳನ್ನು ಮೂಡಿಸುವ ಇವನ ಕವಿತಾ ಶಕ್ತಿ ವಿಶಾಲ ವಿಶ್ವಭಾವನೆಯ ಬಾಗಿಲು ತೆರೆಸುತ್ತದೆ.

**"ನಾ ಋಷಿಃ ಕುರುತೇ ಕಾವ್ಯಂ"** ಋಷಿಯಾಗದವನು ಕಾವ್ಯ ರಚಿಸಲಾರ ಎಂಬ ಮಾತಿಗೆ ಅಪವಾದ ಎಂಬಂತೆ ಈತ ಋಷಿಯಾಗದಿದ್ದರೂ ಒಂದು ಸ್ವತಂತ್ರ ಸಾಹಿತ್ಯದ ರೂಪವನ್ನು ಸೃಷ್ಟಿಸಿಕೊಂಡು ತನ್ನ ಅಮೋಘ ಕವಿತಾ ಶಕ್ತಿಯಿಂದ ಸರ್ವಜ್ಞ ಆಶು ಕವಿಯಾಗಿ ಊರೂರು ಅಲೆಯುತ್ತಾ, ಒಂದು ವಸ್ತುವನ್ನು ನೋಡಿದಾಕ್ಷಣ ಒಂದು ವಿಷಯವನ್ನು ಕೇಳಿದಾಕ್ಷಣ ಹಾಗೂ ತನ್ನ ಅರಿವಿಗೆ ಬಂದ ತಕ್ಷಣ ತ್ರಿಪದಿಯಲ್ಲಿ ಅದನ್ನ ಒಡಮೂಡಿಸುವ ಶಕ್ತಿ ಇವನಲ್ಲಿ ಹುಟ್ಟಿದಾರಬ್ಯದಿಂದಲೇ ಬೆಳೆದಿರಬೇಕು. ಹಲಗೆ ಬಳಪವ ಹಿಡಿದವನಲ್ಲ, ಬರೆಯಬೇಕೆಂದು ಬಡಿದಾಡಿದವನಲ್ಲ, ಕವಿಯಾಗಬೇಕೆಂದು ಕಷ್ಟ ಪಟ್ಟವನಲ್ಲ, ಹಾಗಿದ್ದು ಇವನ ಕವಿತಾ ಶಕ್ತಿ ಸಹಜ ಅಷ್ಟೇ ಸರಳವಾದುದು. ಲೋಕ ದರ್ಶನದಲ್ಲಿ ಮಿಂಚಿನಂತೆ ಹೊಳೆದು ಸಿಡಿಲಿನಂತೆ ಬಡಿದು, ಪ್ರವಾಹದಂತೆ ಉಕ್ಕಿಬಂದಿತು. ಇವನ ತ್ರಿಪದಿಗಳಲ್ಲಿ ಪ್ರತಿಯೊಂದು ಶಬ್ದ, ಅರ್ಥ, ಅಲಂಕಾರ, ಛಂಧಸ್ಸು, ಉಪಮೇಯ, ರೂಪಕ, ಇವುಗಳನ್ನು ಹೊತ್ತಿಗೊದಗುವಂತೆ ಯಾವ ಅಡೆ, ತಡೆ ಇಲ್ಲದೆ ಸಮರ್ಥವಾಗಿ ಬಳಸಿಕೊಂಡನು ತನ್ನ ಮನಸ್ಸಿಗೆ ಬಂದ ರೀತಿಯಲ್ಲಿ ಯೋಚನೆಯನ್ನು ಯೋಗ್ಯ ಶಬ್ದಗಳನ್ನು ಕಟ್ಟಿಕೊಡುವಲ್ಲಿ ನಿಪುಣನೆನಿಸಿದನು. ಯಾವ ಮಹಾ ಕವಿಗೂ ಕಡಿಮೆಯಾದವನಲ್ಲಾ ಎಂಬುದು ಅವನ ಹೃದಯವನ್ನು ಬಲ್ಲ ಸಹೃಯದವರು ಒಪ್ಪಲೇಬೇಕು.

ಇತಿಹಾಸದಲ್ಲಿ ಅನೇಕ ಧಾರ್ಮಿಕ ಕ್ರಾಂತಿಕಾರರು ಹಿಂದೂಸ್ತಾನದಲ್ಲಿ ಹುಟ್ಟಿದಾರೆ. ಗೌತಮ ಬುದ್ಧ, ರಾಮಾನಂದ, ಕಬೀರದಾಸ, ತುಳಸಿದಾಸ, ತುಕಾರಾಂ, ಇವರೆಲ್ಲರೂ ಅಹಿಂಸಾವಾದಿಗಳಾಗಿ ವರ್ಣಾಶ್ರಮದ ಗೊಂದಲವನ್ನು ಕಿತ್ತೊಗೆದು ಸಮತಾವಾದದಿಂದ ಕ್ರಾಂತಿಮಾಡಿದ್ದನ್ನು ಕಾಣುತ್ತೇವೆ. ಹಿಂದೂ ಜನಾಂಗದಲ್ಲಿ ವೇದ ಧರ್ಮದಲ್ಲಿನ ಯಜ್ಞಯಾಗ, ವರ್ಣಾಶ್ರಮ, ಸ್ತ್ರೀ ಪುರುಷ ಭೇದ ಮೊದಲಾದ ತತ್ವಗಳ ಮೇಲೆ ಕ್ರಾಂತಿಧ್ವಜವನ್ನು ಎತ್ತಿಹಿಡಿದು ವಯಕ್ತಿಕವಾಗಿ ಸಾಮೂಹಿಕವಾಗಿ ಚಳುವಳಿ ನಡೆಸಿದ ಪ್ರಮುಖರೆಂದರೆ ವೀರಶೈವ ಶಿವಶರಣರು. ಇಂತಾ ವೀರಶೈವ ಮತೋದ್ಧಾರಕರಾದ ವಿಶ್ವಮಾನವ ಮಹಾಮಾನವತಾವಾದಿ ಬಸವಣ್ಣ, ಕಾಲಜ್ಞಾನಿ ಚನ್ನಬಸವೇಶ್ವರ, ಸಿದ್ಧರಾಮೇಶ್ವರರು ಮೊದಲಾದ ಪ್ರಮಥರು. ವೀರಶೈವ ವಿಚಾರಗಳ ಬಗ್ಗೆ ಮಾರ್ಮಿಕವಾಗಿ ಟೀಕಿಸಿ ಅಂತರಂಗದ ಅನುಭವಕ್ಕೆ ಒತ್ತುಕೊಟ್ಟು ಅದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟವರೆಂದರೆ ವಚನಕಾರರು. ಇದೇ ಗುಂಪಿಗೆ

ಸೇರಿದ ಸರ್ವಜ್ಞ ತನ್ನ ಅನುಭವಕ್ಕೆ ವಿರುದ್ದವಾಗಿ ವೇದ ಪುರಾಣವನ್ನು ಹೇಳಲು ಬಂದ ವೈದಿಕನಿಗೆ ಸಿಡಿಮಿಡಿಯಗಿ ವೇದವೇ ಹಿರಿದೆಂದು । ವಾದವನು ಮಾಡುವಿರಿ ॥ ವೇದದಲೇನು ಅರಿದಿಹುದು ? ಅನುಭವಿಯ । ವೇದವೇ ವೇದ ಸರ್ವಜ್ಞ॥ ಜಾತಿ, ಜಾತಿಗಳ ಹೊಡೆದಾಟವನು ನೋಡಿ

ಕೋತಿಗೆ ಗುಣವಿಲ್ಲಾ । ಮಾತಿಗೆ ಕೊನೆಯಿಲ್ಲಾ ।
ಸೋತು ಹೋದವಗೆ ಸುಖವಿಲ್ಲಾ । ಅರಿದವಗೆ ।
ಜಾತಿಯೇ ಇಲ್ಲ ಸರ್ವಜ್ಞ

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು
ಸುಡುವಗ್ನಿಯೊಂದ ಇರುತಿರಲು ಕುಲಗೋತ್ರ ।
ನಡುವೆಯೆತ್ತಣದು ಸರ್ವಜ್ಞ

ಎಂಬ ವಿಶ್ವ ಬಂಧುತ್ವ ಸಂದೇಶ ಸಾರಿದ ಮಹಾಮಾನವತಾವಾದಿ ಸರ್ವಜ್ಞ, 'ಸರ್ವಜ್ಞ ಪ್ರಧಾನವಾಗಿ ವಿರಕ್ತ ಹಾಗೂ ಆಧ್ಯಾತ್ಮ ಸಾಧಕ ಅವನು ಒಂದಡೆ ನಿಂತವನಲ್ಲ, ನೆರಳು ಬೇಕೆಂದವನಲ್ಲ ಬಿಸಿಲು ಮಳೆಗಳಿಗೆ ಅಂಜಿದವನಲ್ಲ ಮನೆಮನೆಯ ಮುದ್ದೆ ಮಾರಿಗಡಿಯ ನಿದ್ದೆ, ಸಿಕ್ಕರೂ ಸರಿ, ಸಿಗದಿದ್ದರೂ ಸಂಕಟವಿಲ್ಲ, ಹೀಗಿದ್ದೂ ಅವನ ಆಧ್ಯಾತ್ಮ ಸಾಧನೆಯ ಮೆಟ್ಟಿಲುಗಳನ್ನ ಸಹ ಅವನ ವಚನಗಳಿಂದಲೆ ಗುರುತಿಸಬಹುದು. ಅವನು ಗುರು ಮಹಿಮೆಯನ್ನು ವಿಸ್ತಾರವಾಗಿ ವಿವರಿಸಿದರೂ ಅವನಿಗೆ ಲಿಂಗಧೀಕ್ಷೆ ಕೊಟ್ಟ ಗುರು ಯಾರು ಎನ್ನುವದು ಮಾತ್ರ ಅವನ ವಚನಗಳಿಂದ ತಿಳಿದು ಬರುವದಿಲ್ಲ. ಈ ಸತ್ಯಕಾಮನಿಗೆ ಸ್ವಯಂಸಿಧ್ಧನಾದವನಿಗೆ ಗುರೂಪದೇಶದ ಅಗತ್ಯವಿರಲಿಲ್ಲವೇನೊ, ಸುತ್ತಣ ಸಮಾಜ ಹಾಗೂ ವಿಶಾಲವದ ಲೋಕವೇ ಅವನ ಗುರುವೇ. ಗುರುಮುಖದಿಂದಲ್ಲದೆ ಮುಕ್ಕಣ್ಣನನ್ನ ಅರಿಯಲಾಗದು ಎಂದು ಘೋಸಿಸುತ್ತಾನೆ.

ಮಂಡೆ ಬೋಳಾದಡೇನು ದಂಡ ಕೋಲ್ವಿಡಿದಡಂ
ಹೆಂಡತಿಯ ಬಿಟ್ಟು ನಡೆದೊಡಂ ಗುರುಮುಖದ
ಕಂಡಲ್ಲದಿಲ್ಲ ಸರ್ವಜ್ಞ।

ಸತ್ಯದ ದಾರಿಯನು ಯಾರು ತೋರಿದರೇನು? ಊರಿಂಗೆ ದಾರಿಯನು । ಯಾರು ತೋರಿದಡೇನು । ಸಾರಾಯದ ನಿಜವ ತೋರುವ ಗುರುವು ತಾ । ನಾರಾದಡೇನು ಸರ್ವಜ್ಞ ॥೫೮॥ ನಿಜದ ಅರಿವನ್ನು ತೋರಿದಾತನೆ ಗುರುವಾಗುತ್ತಾನೆ. ಇಂದಿನ ಗುರುಗಳ ಚಿತ್ರಣವನ್ನು ಕಣ್ಣಮುಂದೆ ತೆರೆದುಕೊಂಡಾಗ ಈ ಮಾತಿನ ಅರ್ಥವಾದೀತು. ಪರತತ್ವ ತನ್ನೊಳಗೆ । ಎರವಿಲ್ಲದಿರುತಿರ್ದು। ಪರದೇಶಿಯಂತಿರ್ಪ ಯೋಗಿಯನು ಪರಮ ಗುರುವೆಂಬ ಸರ್ವಜ್ಞ । ॥೫೯॥ ತನ್ನತಾನರಿತರೇ ಗುರುವೇಕೆ ಬೇಕು ಅವನೆ ಪರದೇಶಿಯಾಗಿರುವಾಗ ನಮಗೆ ಸನ್ಮಾರ್ಗ ತೋರಿಸುವನೇ ಎಂಬ ದಿವ್ಯದೃಷ್ಟಿ ಸರ್ವಜ್ಞನದು. ಸರ್ವಜ್ಞನರುಹಿದ ಸತ್ಯ, ಧರ್ಮ, ನೀತಿ, ವಿಶ್ವಮಾನವತೆಯ ಕಣ್ಣು ತೆರೆಸುತ್ತವೆ.

ಜಾತಿ ಸೂತಕವಳಿದು, ಭ್ರಾಂತಿಯ ಗುಣವಳಿದು
ಆತುಮನ ನೆಲೆಯರಿತು ನಿಂದವಗೆ
ಯಾತರದ ಚಿಂತೆ – ಸರ್ವಜ್ಞ।

ಜಾತಿಯತೆಯನ್ನು ತ್ಯಜಿಸಿ ಭ್ರಾಂತಿಯನು ಬಿಟ್ಟು ತನ್ನ ಆತ್ಮದ ನೆಲೆಯನ್ನು ಅರಿತು ಜಗದ ಕಲ್ಯಾಣ ಬಯಸುವ ಜೀವಿಯೇ ಜಂಗಮನೆನಿಸಿಕೊಳ್ಳುತ್ತಾನೆ. ವೀರಶೈವ ಧರ್ಮದ ಜೀವಾಳವೇ ಜಂಗಮನೆನಿಸಿದ್ದಾನೆ. ಗುರು–ಲಿಂಗ–ಜಂಗಮ ಈ ತ್ರಿವೇಣಿ ಸೂತ್ರಗಳು ಲಿಂಗಧಾರಿಯ ಬಾಳನ್ನು ಸುಸೂತ್ರವಾಗಿ ಸಾಗಿಸುವದಕ್ಕೆ ಸಹಾಯಕವಾಗಿವೆ.

ಈ ಜಗದ ಮಾನವರೆಲ್ಲರ ಹುಟ್ಟಿಗೆ ಕಾರಣವಾದ ಅಂಶಗಳು ಹಾಗೂ ಹುಟ್ಟು ಸ್ಥಾನ ಒಂದೆ ಬಗೆಯಾಗಿದೆಯೋ ಅದೇ ರೀತಿಯಲ್ಲಿ ನಮ್ಮೆಲ್ಲರ ಶರೀರದ ಅವಯವಗಳು ಕೂಡಾ ಒಂದೇ ತೆರನಾಗಿವೆ. ಅದನ್ನೇ ಸರ್ವಜ್ಞ ಅವಯೆವಗಳೆಲ್ಲರಿಗೂ ಸಮನಾಗಿ ಇರುತಿರಲು ಭವಿ-ಭಕ್ತ-ಶ್ವಪಚ- ಶೂದ್ರರಿಂತೆಂಬ ಕವನವೆತ್ತಣದು? ಸರ್ವಜ್ಞ । ॥೮೭೪॥ ನಮ್ಮೆಲ್ಲರ ಅವಯವಗಳು ಒಂದೇ ಬಗೆಯಾಗಿರುವಾಗ ನಮ್ಮಲ್ಲಿಯೇ ಮೇಲು-ಕೀಳುಗಳೇಕೆ ?ಭೇದ ಮಡಲು ಆಧಾರವೇನು ಹಾಗೆ ಮಾಡುವದು ಜ್ಞಾನಿಯಲಕ್ಷಣವನಿಸಲಾರದು? ಎಂಬುದು ಸರ್ವಜ್ಞನ ಮನದಿಂಗಿತವಾಗಿದೆ. ಅಷ್ಟೆ ಅಲ್ಲದೆ ಆ ದೇಹದ ಇಂಗಿತಗಳು ಗುಣ-ಧರ್ಮಗಳು ಒಂದೆ ತೆರನಗಿವೆ ಎಂಬುದನ್ನ, ಹಸಿವು ತೃಷೆ ನಿದ್ರೆಗಳು ವಿಷಯ ಮೈಥುನ ಬಯಕೆ । ಪಶುಪಕ್ಷಿನರರಿಗೆ ಸಮನಿರಲು ಕುಲವೆಂಬ ಘಸಣಿಯೆತ್ತಣದು? ಎಂದು ಸರ್ವಜ್ಞ ಕೇಳುತ್ತಾನೆ. ನಮ್ಮೆಲ್ಲರ ಶರೀರದ ಗುಣಧರ್ಮಗಳು ಬೇರೆ-ಬೇರೆಯಾಗಿಲ್ಲ ಒಂದೆ ರೀತಿಯಾಗಿವೆ. ಎಲ್ಲ ಜೀವಿಗಳಲ್ಲಿಯೂ ಹಸಿವು ನಿದ್ರೆ ನೀರಡಿಕೆ ವಿಷಯಾದಿ ಬಯಕೆಗಳು ಸಹಜವಾಗಿ ಉಂಟಾಗುತ್ತವೆ, ಎಲ್ಲರ ಶರೀರದ ಸ್ವರೂಪವೂ ಒಂದೆ ಮಲಮಾಂಸಗಳ ಸೋರಿಕೆಯಾಗಲಿ ರೋಮಗಳಾಗಲಿ ಎಲ್ಲರ ದೇಹದಲ್ಲಿಯೂ ಉಂಟು, ಹೀಗಿದ್ದು ನಾವು ಮೇಲು-ಕೀಳೆಂಬ ಭಾವನೆ ತೋರುವದು ಯಾವ ನ್ಯಾಯ? ಇದೆ ವಿಚಾರವನ್ನು ಶರಣರ ವಿಶ್ವಮಾನವ ದೃಷ್ಟಿಯಲ್ಲಿ ಕಾಣುತ್ತೇವೆ, ಸರ್ವಜ್ಞನದು ಕೂಡಾ ಸರ್ವ ವಿಷಯಗಳಲ್ಲಿ ವಿಶ್ವಮಾನವ ದರ್ಶನ ಕಾಣುತ್ತಾನೆ.

ಅರಿವಿನಾ ಅರಿವು ತಾ । ಧರೆಯೊಳಗೆ ಮೆರೆದಿಹುದು ।
ಅರಿವಿನಾ ಅರಿವ ಹರಿ ಹರ ಬೊಮ್ಮರು ।
ಅರಿಯರೈ ಕಾಣಯ್ಯ ಸರ್ವಜ್ಞ।

ಅರಿವೇ ಗುರು ನಮ್ಮರಿವಿನಿಂದಲೇ ಜಗದರಿವಾಗುತ್ತದೆ. ಅರಿವಿನಾ ಅರಿವನ್ನು ಹರಿ ಹರ ಬ್ರಹ್ಮರೂ ಅರಿತಿಲ್ಲ ಇನ್ನೂ ಸಾಮಾನ್ಯರ ಪಾಡೆನು । ಹೀಗೆ ಅರಿವಿನ ಮಹಿಮೆ ಎಲ್ಲದಕೂ ಕಾರಣ ಅರಿತು ನೆಡೆದರೆ ಸ್ವರ್ಗ ಮರೆತು ನೆಡೆದರೆ ನರಕ ಆದ್ದರಿಂದ ಪ್ರತಿಯೊಬ್ಬರೂ ಅರಿತು ನೆಡೆಯಬೇಕು.

ಜನಕೆ ರಂಜನೆ ಲೇಸು ।ವನಕೆ ಪುಷ್ಪವು ಲೇಸು ।
ಧನಕಿಂದ ಬುದ್ದಿನೆರೆ ಲೇಸು, ಬುದ್ದಿಯಿಂ ।
ಅನುಭಾವ ಲೇಸು ಸರ್ವಜ್ಞ।

ಹೀಗೆ ಸರ್ವಜ್ಞ ತನ್ನ ಲೋಕಾನುಭವಗಳನ್ನ ಸಮಾಜದ ವಿಮರ್ಶೆಯನ್ನು ಸಮರ್ಥವಾಗಿ ಮಾಡುತ್ತಲೇ ಲೋಕದ ಜನರಿಗೆ ಆದರ್ಶದ ವ್ಯಕ್ತಿಯಾಗಿ ನೆಲೆಗೊಂಡಿದ್ದಾನೆ. ಸರ್ವಜ್ಞನ ಲೋಕಾನುಭವ ವಿಸ್ತಾರವಾದುದು. ಜನಪದರ ಪ್ರತಿನಿಧಿಯಾಗಿ ಸರ್ವಜ್ಞ ಹೇಳದ ವಿಷಯಗಳಿಲ್ಲ. ಒಳ್ಳೆಯದನ್ನು ಮೆಚ್ಚುವ ಒಳ್ಳೆಯದಲ್ಲದನ್ನು ನಿರ್ಭಿತಿಯಿಂದ ವಿಮರ್ಶಿಸುವ ಸಹಜ ವ್ಯಕ್ತಿತ್ವ ಹೊಂದಿದ ಕನ್ನಡದ ನಿಜವಾದ ಸಂತ. ಅನುಭಾವಿ ಕವಿಗಳಲ್ಲಿ ಪ್ರಮುಖನೆನಿಸಿದ್ದಾನೆ.

ನಿಜವಾಗಿಯೂ ಸರ್ವಜ್ಞ ಸಾಹಿತ್ಯಿಕವಾಗಿ ಹಾಗೂ ಸಾಂಸ್ಕ್ರತಿಕವಾಗಿ ಅವಜ್ಞೆಗೊಳಗಾಗಿದ್ದಾನೆ. ಜೊತೆಗೆ ಪ್ರಭುತ್ವ ಮತ್ತು ಧರ್ಮಗಳಿಂದಲೂ ಆತ ಮನ್ನಣೆಯಿಲ್ಲದವನಾಗಿದ್ದಾನೆ. ದಕ್ಷಿಣ ಭಾರತದ ವೇಮನ, ತಿರುವಳ್ಳುವರ್‌ನಷ್ಟೇ ಪ್ರಸಿದ್ದನಾದ ಈತನ ಹೆಸರಲ್ಲಿ ಒಂದು **ಪ್ರಾಧಿಕಾರ** ಇಲ್ಲ. ಕರ್ನಾಟಕದ ಯಾವ ವಿಶ್ವ ವಿದ್ಯಾನಿಲಯದಲ್ಲಿಯೂ ಒಂದು **ಅಧ್ಯಯನ ಪೀಠ** ಎಲ್ಲ. ಒಂದು **ಸಂಶೋಧನಾ ಕೇಂದ್ರ** ಇಲ್ಲ. ಅವನು ಹುಟ್ಟಿ ಬೆಳೆದ ಊರುಗಳು ಅಭಿವೃದ್ದಿಯಾಗಿಲ್ಲ. ಅವನ ಸಾಹಿತ್ಯ ಕುರಿತಂತೆ ಆಗಬೇಕಾದ ಕೆಲಸಗಳು ಅಗಾಧವಾಗಿವೆ. ಆತ ಮತ್ತು ಆತನ ಸಾಹಿತ್ಯ ಕುತೂಹಲಿಗಳಿಗೆ, ಅಭ್ಯಾಸಿಗಳಿಗೆ, ಸಂಶೋಧನಾಸಕ್ತರಿಗೆ ಸದಾ ಅಹ್ವಾನ ನೀಡುತ್ತವೆ. ಸರ್ವಜ್ಞ ನಮ್ಮ ನಿಮ್ಮೆಲ್ಲರ ಮೈಮನಗಳಲ್ಲಿ ಕಾಡುವ ಪ್ರಜ್ಞೆಯಾಗಿದ್ದಾನೆ. ಆತನ ಈ ಕಾಡುವಿಕೆಯೇ ಉಳಿದೆಲ್ಲ ಕೆಲಸಗಳನ್ನು ಮಾಡಿಸಬೇಕಾಗಿದೆ. ಅದು ಅನಿವಾರ್ಯವೂ ಆಗಿದೆ.

## ಗ್ರಂಥ ಋಣ


**ಜಂಗಮ ಕವಿ ಸರ್ವಜ್ಞ** : ಡಾ॥ ಬಿ.ಜಿ.ಚನ್ನೇಶ, ಹೊನ್ನಾಳಿ ಸಿಂಚನಾ ಗ್ರಂಥಮಾಲೆ ಹಾವೇರಿ

**ಸರ್ವಜ್ಞನ ವಚನಗಳು** : ಸಂ. ಉತ್ತಂಗಿ ಚನ್ನಪ್ಪ ೧೯೨೪

**ಸರ್ವಜ್ಞನ ವಚನಗಳು** : ಸಂ. ಡಾ॥ ಎಲ್.ಬಸವರಾಜ. ಪ್ರ. ಗೀತಾ ಬುಕ್ ಹೌಸ್ ಮೈಸೂರು ೧೯೭೨

**ನಾಗರ ಖಂಡ ೭೦** : ಡಾ॥ ಭೋಜರಾಜ.ಪಾಟೀಲ್ ಪ್ರಕಾಶನ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ ಆನಂದಪುರ ೧೯೯೫

**ಸರ್ವಜ್ಞನ ವಚನ ಸಂಗ್ರಹ** : ಕರ್ನಾಟಕ ಸರ್ಕಾರದ ಸರ್ವಜ್ಞ ಚತುರ್ಥ ಶತಮಾನೋತ್ಸವ ಸಮಿತಿ,ಬೆಂಗಳೂರು.

**ಸರ್ವಜ್ಞನ ಕವಿ** : ದ.ರಾ ಬೆಂದ್ರೆ ೧೯೪೧

**ಸರ್ವಜ್ಞ ಒಂದು ಅಧ್ಯಯನ** : ದೇ.ಜ.ಗೌ. ಪ್ರಕಾಶಕರು ಪ್ರಕಾಶನ ಮಂದಿರ ನಿಯಮಿತ, ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು.೧೯೭೪


— ೦ —